ದಿನಾಂಕ 14-11-2025 ರಂದು ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ .ಎಸ್.ಪಿ.ಕೆ. ವಕೀಲರಿಂದಃ**

ನನ್ನ ಅಜ್ಜನಿಗೆ ಒಂದು ಎಕರೆ ಜಾಗ ಇತ್ತು. ವಾದಿಯು ಸರ್ಕಾರಿ ಜಾಗದಲ್ಲಿ ವಾಸವಿದ್ದಾರೆ. ನನ್ನ ಅಜ್ಜ ಮನ್ಸ ಬೀರಿಗ ಎಂಬವರಿಗೆ ಮಂಜೂರಾದ ಜಾಗ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಮಂಜೂರಾದ ಜಾಗದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ ಇದೆ. ನನ್ನ ಅಜ್ಜನಿಗೆ ಸೇರಿದ ಜಾಗದ ಕುರಿತು ಇಲ್ಲಿಯ ತನಕ ದಾಖಲೆ ಪತ್ರ ಬರೆದುಕೊಟ್ಟಿಲ್ಲ. ಈ ವ್ಯಾಜ್ಯವು ನನ್ನ ಅಜ್ಜನ ಭೂಮಿಗೆ ಸಂಬಂಧಪಟ್ಟಿದ್ದು. ಅಜ್ಜನ ಭೂಮಿಯಲ್ಲಿ ಪಾಲಾಗಲು ನನ್ನದೇನು ಆಕ್ಷೇಪ ಇಲ್ಲ. ನನ್ನ ಕ್ಲೇಮು ಇರುವುದು ನನ್ನ ತಂದೆಗೆ ಬಂದ ಒಂದು ಎಕರೆ ಜಾಗದಲ್ಲಿ. ನನ್ನ ತಂದೆಗೆ ನಾವು ಒಟ್ಟು 2 ಜನ ಮಕ್ಕಳು. ನನ್ನ ತಂದೆಗೆ ಸೇರಿದ ಒಂದು ಎಕರೆ ಭೂಮಿಯಲ್ಲಿ ನನ್ನ ಮತ್ತು ನನ್ನ ತಮ್ಮನಿಗೆ ಮಾತ್ರ ಪಾಲು ಇದೆ. ತಂದೆಗೆ ಮಂಜೂರಾದ ಆಸ್ತಿಯಲ್ಲಿ ನನ್ನ ಚಿಕ್ಕಪ್ಪ ಮತ್ತು ಅತ್ತೆಗೆ ಪಾಲು ಇದೆ ಎಂದರೆ ಆ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಈ ದಾವೆಯಲ್ಲಿ ಒಂದು ವಿಲ್ ನ್ನು ಸೃಷ್ಟಿ ಮಾಡಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ಬಗ್ಗೆ ನನ್ನ ಅಣ್ಣನಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ವ್ಯಾಜ್ಯದಲ್ಲಿ ನಾನು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒಂದು ಅಂಶದ ಪಾಲನ್ನು ವಾದಿಯವರಿಗೆ ಕೊಡಲು ನನ್ನದೇನು ಆಕ್ಷೇಪ ಇಲ್ಲ.

ಮರು ವಿಚಾರಣೆಃ ಇಲ್ಲ.
ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ, ಹೇಳಿ, ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.